

ಎಲ್ಲಿದೆ ದಾರಿ? ಸಾಯುವುದು ಸುಲಭ,
ಸ್ಮಶಾನ ತಲುಪುವುದು ಸಲೀಸಲ್ಲ...

# ಈ ತಾತ್ಸಾರ ನ್ಯಾಯವೇ?

## ಸಾವು, ಸುಡುಗಾಡು, ಅಂತ್ಯಸಂಸ್ಕಾರ ಇತ್ಯಾದಿ...

ತಮ್ಮ ಅಂತಿಮಯಾತ್ರೆಗೆ ಬಳಕೆಯಾಗುವ ವಾಹನ ಸುಸಜ್ಜಿತವಾಗಿಯೂ, ಅಂದವಾಗಿಯೂ ಇರಬೇಕು ಎಂದು ಎಚ್. ನರಸಿಂಹಯ್ಯನವರು ಬಯಸಿದ ಹಾಗೆಯೇ ನನ್ನಂಥವರು ನಮ್ಮ ಅಂತಿಮಸಂಸ್ಕಾರ ನಡೆಯುವ ಜಾಗ ಅಚ್ಚುಕಟ್ಟಾಗಿಯೂ, ವ್ಯವಸ್ಥಿತವಾಗಿಯೂ ಇರಬೇಕು ಎಂದು ಬಯಸುತ್ತೇವೆ. ಆದರೆ, ಅದನ್ನು ಮಾಡಬೇಕಾದ ಶಾಸಕರ, ಸಚಿವರ ಶವಸಂಸ್ಕಾರ ಒಂದೋ ಅವರ ಜಮೀನಿನಲ್ಲಿ ನಡೆಯುತ್ತದೆ ಅಥವಾ 'ಸಕಲ ಸರ್ಕಾರಿ ಗೌರವಗಳು ಸಲ್ಲಿಕೆಯಾಗುವಾಗ' ಎಲ್ಲವೂ ಸರಿಯಾಗಿ ಇರುತ್ತದೆಯೋ ಏನೋ? ಶಾಸಕರು, ಸಚಿವರು ಆಗೀಗ ಸ್ಮಶಾನಗಳಿಗೆ ಹೋಗಿ ಬರಬೇಕು.

■ ಪದ್ಮರಾಜ ದಂಡಾವತಿ

